ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೯**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಶುಕ್ರವಾರ, ದಿನಾಂಕ: ೧೩ನೇ ಮಾರ್ಚ್, ೨೦೨೬**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು
೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
೩. ಕೃಷಿ ಸಚಿವರು
೪. ಕಾರ್ಮಿಕ ಸಚಿವರು
೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು
೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಆಹಾರ ಗುಣಮಟ್ಟ ಹೆಚ್ಚಿಸುವ MSPC ಕೇಂದ್ರಗಳನ್ನು ಹೆಚ್ಚಿಸುವ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೧೨೧ (೧೨೦೮) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂಗನವಾಡಿ ಮಕ್ಕಳಿಗೆ ಪ್ರಸ್ತುತ ನೀಡಲಾಗುತ್ತಿರುವ ಆಹಾರಗಳೇನು ; ನೀಡಲಾಗುತ್ತಿರುವ ಆಹಾರಗಳ ಪೌಷ್ಠಿಕ ಮಾನದಂಡಗಳೇನು ;

(ಆ) ಅಂಗನವಾಡಿಗಳಲ್ಲಿ ಚಿಕ್ಕಿ ವಿತರಣೆ ನಿಲ್ಲಿಸಿರುವ ಹಿನ್ನೆಲೆ ಏನು ; ಅದರ ಬದಲಿಗೆ ನೀಡಲಾಗುತ್ತಿರುವ ಆಹಾರದ ಪೌಷ್ಠಿಕ ಮೌಲ್ಯಮಾಪನ ಕೈಗೊಳ್ಳಲಾಗಿದೆಯೇ ;

(ಇ) ಅಂಗನವಾಡಿ ಮಕ್ಕಳಿಗೆ ಎಷ್ಟು ದಿನಗಳಿಗೊಮ್ಮೆ ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ ; ವಿತರಿಸಲಾಗುತ್ತಿರುವ ಮೊಟ್ಟೆಯು ಪೌಷ್ಠಿಕ ಮಾನದಂಡಗಳಿಗೆ ಅನುಗುಣವಾಗಿದೆಯೇ ;

(ಈ) ರಾಜ್ಯದಲ್ಲಿರುವ ಅಂಗನವಾಡಿ MSPC ಪ್ರತಿ ಕೇಂದ್ರದ ಅಡಿಯಲ್ಲಿ ಬರುವ ಅಂಗನವಾಡಿಗಳ ಸಂಖ್ಯೆ ಎಷ್ಟು ;

(ಉ) MSPC ಪ್ರತಿ ಕೇಂದ್ರದ ಸಂಖ್ಯೆ ಹೆಚ್ಚಳ ಮಾಡುವ ಕುರಿತು ಹಾಗೂ ಆ ಮೂಲಕ ಗುಣಮಟ್ಟದ ಆಹಾರ ಉತ್ಪಾದನೆ ಮತ್ತು ಸರಿಯಾದ ಸಮಯಕ್ಕೆ ಆಹಾರ ಸರಬರಾಜು ಖಾತ್ರಿ ಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಊ) ಒಟ್ಟಾರೆ ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ವಿತರಿಸಲಾಗುವ ಆಹಾರದ ಗುಣಮಟ್ಟ ಹೆಚ್ಚಿಸಲು ಕಳಪೆ ಆಹಾರ ತಡೆಗಟ್ಟಲು ಸಮಯಕ್ಕೆ ಆಹಾರ ಸರಬರಾಜು ಮಾಡಲು ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ? (ವಿವರ ಒದಗಿಸುವುದು)

## ಹೊಲಿಗೆಯಂತ್ರ ವಿತರಣೆ ಯೋಜನೆ ಕುರಿತು

**ಡಾ॥ ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೨ (೧೩೦೦) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಡಿ ಕಾರ್ಯನಿರ್ವಹಿಸುವ ಎಲ್ಲಾ ನಿಗಮಗಳಡಿ ಹೊಲಿಗೆಯಂತ್ರ ವಿತರಣಾ ಯೋಜನೆಯಡಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆಯೆಷ್ಟು ; (ನಿಗಮವಾರು ಮಾಹಿತಿ ನೀಡುವುದು)

(ಆ) ಕಳೆದ ಮೂರು ವರ್ಷಗಳಲ್ಲಿ ಹೊಲಿಗೆಯಂತ್ರ ವಿತರಣೆ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿ ಹೊಲಿಗೆಯಂತ್ರ ವಿತರಿಸಲಾಗಿದೆ ? (ನಿಗಮವಾರು, ವರ್ಷವಾರು, ಜಿಲ್ಲಾವಾರು ವಿವರ ಒದಗಿಸುವುದು)

# ಸಮಾಜ ಕಲ್ಯಾಣ ಇಲಾಖೆ ಮತ್ತು ಭೋವಿ ಅಭಿವೃದ್ಧಿ ನಿಗಮದ ಅನುದಾನದ ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೩ (೧೫೯೦) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೨೫–೨೬ನೇ ಸಾಲಿನ ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ನೀಡಿರುವ ಅನುದಾನ ಎಷ್ಟು ;

(ಆ) ನೀಡಿರುವ ಅನುದಾನದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಜಿಲ್ಲಾವಾರು ಹಂಚಿಕೆ ಮಾಡಿರುವ ಅನುದಾನದ ಮಾಹಿತಿಯನ್ನು ಒದಗಿಸುವುದು ;

(ಇ) ಜಿಲ್ಲಾವಾರು ಹಂಚಿಕೆ ಮಾಡಿರುವ ಅನುದಾನದಲ್ಲಿ ಇಲ್ಲಿಯವರೆಗೂ ಖರ್ಚಾಗಿರುವ ಅನುದಾನವೆಷ್ಟು ; ಜಿಲ್ಲಾವಾರು ಮಾಹಿತಿ ಒದಗಿಸುವುದು ;

(ಈ) ೨೦೨೫–೨೬ನೇ ಸಾಲಿನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ವಿವಿಧ ಯೋಜನೆಗಳಡಿಯಲ್ಲಿ ಹಂಚಿಕೆ ಮಾಡಿರುವ ಹಾಗೂ ಈ ಅನುದಾನವನ್ನು ಖರ್ಚು ಮಾಡಿರುವ ವಿವರವಾದ ಮಾಹಿತಿ ಒದಗಿಸುವುದು ;

(ಉ) ಇದೇ ಸಾಲಿನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಲ್ಲಿ ಲಭ್ಯವಿರುವ ಸರ್ಕಾರದ ಸಾಂಸ್ಥಿಕ ಕೋಟಾದಡಿಯಲ್ಲಿ ನೇರ ಸಾಲ, ಗಂಗಾ ಕಲ್ಯಾಣ, ಉದ್ಯಮಶೀಲತೆ, ಮೈಕ್ರೋ ಕ್ರೆಡಿಟ್ ಹಾಗೂ ಸ್ವಾವಲಂಬಿ ಸಾರಥಿ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಂಜೂರಾತಿ ನೀಡಿದ ಪಟ್ಟಿಗಳನ್ನು ರದ್ದುಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಯಾವ ಕಾರಣಕ್ಕೆ ರದ್ದುಪಡಿಸಲಾಗಿದೆ ; ವಿವರ ನೀಡುವುದು ; ಹಾಗೂ ಈ ಫಲಾನುಭವಿಗಳ ಪಟ್ಟಿಯನ್ನು ರದ್ದುಪಡಿಸಿರುವುದನ್ನು ಹಿಂದಕ್ಕೆ ಪಡೆದು ಮಂಜೂರಾದ ಪಟ್ಟಿಯಲ್ಲಿರುವ ಫಲಾನುಭವಿಗಳಿಗೆ ಅನುದಾನ ನೀಡಲಾಗುವುದೇ ?

# ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಮನೆಗಳ ಯೋಜನೆಗಳ ಹಾಗೂ ಪ್ರಗತಿಯ ವಿವರವನ್ನು ನೀಡುವ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೪ (೧೩೦೨) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಸಂಖ್ಯೆ ಎಷ್ಟು ; ತಾಲ್ಲೂಕುವಾರು ಮಾಹಿತಿ ನೀಡುವುದು ; ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ನೆಲೆಸಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಪಂಗಡಗಳ ಹೆಸರು ಮತ್ತು ಜನಸಂಖ್ಯೆಯ ಮಾಹಿತಿ ನೀಡುವುದು ;

(ಆ) ೨೦೦೭–೦೮ ರಿಂದ ೨೦೨೨–೨೩ರವರೆಗೆ ಸದರಿ ಜನಾಂಗದ ಜನರಿಗೆ ಮಂಜೂರಾದ ಮನೆಗಳ ಸಂಖ್ಯೆ ಎಷ್ಟು ; ವಿವಿಧ ಹಂತದವರೆಗೆ ನಿರ್ಮಿಸಿಕೊಂಡಿರುವ ಮನೆಗಳ ಪ್ರಗತಿಯ ವಿವರ ನೀಡುವುದು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಸದರಿ ಜನಾಂಗದವರಿಗೆ ಸಂಬಂಧಿಸಿದಂತೆ ನಿವೇಶನ ರಹಿತ ಮತ್ತು ವಸತಿ ರಹಿತ ಸರ್ವೇ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ನಿವೇಶನ ಮತ್ತು ವಸತಿ ರಹಿತರ ವಿವರಗಳನ್ನು ನೀಡುವುದು ; ಯಾವ ಕಾಲಮಿತಿಯಲ್ಲಿ ಸರ್ವೇ ನಡೆಸಲಾಗುವುದು ;

(ಈ) ಬಾಗಲಕೋಟೆ ಜಿಲ್ಲೆಯಲ್ಲಿನ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ಅಧಿಕಾರಿಗಳು ಸಮರ್ಪಕವಾಗಿ ಯೋಜನೆಯ ಮಾಹಿತಿ ತಿಳಿಸದೇ ಇರುವುದರಿಂದ ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನಾಂಗದವರಿದ್ದರೂ ಯೋಜನೆಗಳ ಸದುಪಯೋಗವಾಗದೇ ಇರುವುದರಿಂದ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ ; ಯೋಜನೆ ಸದುಪಯೋಗವಾಗಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

# ಬೀದರ್ ಜಿಲ್ಲೆಯ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸ್ಥಿತಿಗತಿ ಹಾಗೂ ಮೂಲಸೌಕರ್ಯಗಳ ಕುರಿತು

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೫ (೧೧೪೫) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಸ್ವಂತ ಕಟ್ಟಡ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳು ಎಷ್ಟು ; (ಪೂರ್ಣ ವಿವರವನ್ನು ತಾಲ್ಲೂಕುವಾರು ಒದಗಿಸುವುದು)

(ಆ) ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (೨೦೨೩–೨೪ ರಿಂದ ೨೦೨೫–೨೬) ಈ ಜಿಲ್ಲೆಯ ವಿದ್ಯಾರ್ಥಿನಿಲಯಗಳ ನೂತನ ಕಟ್ಟಡ ನಿರ್ಮಾಣ ಹಾಗೂ ದುರಸ್ತಿ ಕಾರ್ಯಗಳಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಒಟ್ಟು ಅನುದಾನವೆಷ್ಟು; ಇದರಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಬಾಕಿ ಇರುವ ಕಾಮಗಾರಿಗಳ ಸ್ಥಿತಿಗತಿ ಏನು ;

(ಇ) ಜಿಲ್ಲೆಯ ಹಲವಾರು ವಿದ್ಯಾರ್ಥಿನಿಲಯಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯಗಳ ಅನಾನುಕೂಲತೆ ಹಾಗೂ ಭದ್ರತಾ ಸಿಬ್ಬಂದಿಯ ಕೊರತೆಯಿಂದ ವಿದ್ಯಾರ್ಥಿಗಳು ಸಂಕಷ್ಟ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು ;

(ಈ) ಬೀದರ್ ಜಿಲ್ಲೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ವಾರ್ಡನ್ (ನಿಲಯಪಾಲಕರು) ಅಡುಗೆ ಸಿಬ್ಬಂದಿ ಮತ್ತು ಗ್ರೂಪ್–ಡಿ ಹುದ್ದೆಗಳ ಸಂಖ್ಯೆ ಎಷ್ಟು ; ಶೈಕ್ಷಣಿಕ ಹಿತದೃಷ್ಟಿಯಿಂದ ಈ ಹುದ್ದೆಗಳನ್ನು ಖಾಯಂ ಅಥವಾ

ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಏನು ;

(ಉ) ೨೦೨೬–೨೭ನೇ ಸಾಲಿನಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಬೀದರ್ ಜಿಲ್ಲೆಗೆ ಹೊಸದಾಗಿ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಅದರ ಸಂಪೂರ್ಣ ವಿವರ ನೀಡುವುದು ?

## ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟದಿಂದ ಪ್ರತಿಭಟನೆ ನಡೆಸುತ್ತಿರುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೬ (೧೨೫೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಅವಧಿ ಮುಗಿದಿದ್ದು ಸದ್ಯ ಇರುವ ಆಡಳಿತ ಮಂಡಳಿಯನ್ನೇ ಮುಂದುವರೆಸುವಂತೆ ಅಥವಾ ಶೀಘ್ರ ಚುನಾವಣೆ ನಡೆಸಲು ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟ ವತಿಯಿಂದ ನಡೆಸುತ್ತಿರುವ ಪ್ರತಿಭಟನೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೭ (೧೧೩೭) ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯಲ್ಲಿ ಎರಡು ವರ್ಷಗಳಲ್ಲಿ ಪ್ರಾರಂಭವಾಗದ ಕಾಮಗಾರಿಗಳ ನಿಧಿಯನ್ನು ಮರಳಿ ಪಡೆಯುತ್ತಿರುವುದು ಸರ್ಕಾರ ಗಮನಕ್ಕೆ

ಬಂದಿದೆಯೇ ; ಬಂದಿದ್ದರೆ, ಸರ್ಕಾರದ ಮಾರ್ಗಸೂಚಿಯ ಸಂಪೂರ್ಣ ಮಾಹಿತಿ ನೀಡುವುದು ;

(ಆ) ಸರ್ಕಾರ ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯನ್ನು ನಿಗಧಿತ ಸಮಯಕ್ಕೆ ನೀಡದೆ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಶಾಸಕರು ಶಿಫಾರಸ್ಸು ಮಾಡಿದ ಕಾಮಗಾರಿಗಳ ಅನುಷ್ಠಾನದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಅನುಷ್ಠಾನದ ಏಜೆನ್ಸಿಗಳಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳು ಯಾವುವು ; ಸಂಪೂರ್ಣ ಮಾಹಿತಿ ನೀಡುವುದು ;

(ಇ) ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯಲ್ಲಿ ಕಾಮಗಾರಿಗಳು ಅನುಷ್ಠಾನಕ್ಕೆ ವಿಧಿಸುವ ತೆರಿಗೆ ಎಷ್ಟು ; ಶಾಸಕರು ಕಾಮಗಾರಿಗಳ ಅನುಷ್ಠಾನಕ್ಕೆ ವಹಿಸಿದ ಏಜೆನ್ಸಿಗಳಲ್ಲಿ ತೆರಿಗೆ ಹೆಸರಿನಲ್ಲಿ ನಿಧಿಯನ್ನು ವಿಪರೀತ ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು ; ಸಂಪೂರ್ಣ ಮಾಹಿತಿ ನೀಡುವುದು ?

## ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ಐಟಿ ಬಿಟಿ ಕಂಪನಿಗಳ ಸ್ಥಾಪನೆ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೨೮ (೧೨೮೯) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಲ್ಯಾಣ ಕರ್ನಾಟಕಕ್ಕೆ ಒಳಪಡುವ ಎಷ್ಟು ಜಿಲ್ಲೆಗಳಿವೆ ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ಜಿಲ್ಲೆಗಳಲ್ಲಿ ಈವರೆಗೆ ಒಟ್ಟು ಎಷ್ಟು ಐಟಿ ಬಿಟಿ ಕಂಪನಿಗಳನ್ನು ಸ್ಥಾಪನೆ ಮಾಡಲಾಗಿದೆ ;

(ಇ) ಐಟಿ ಬಿಟಿ ಕಂಪನಿಗಳನ್ನು ನಿರ್ಮಾಣ ಮಾಡುವ ಸಲುವಾಗಿ ಸರ್ಕಾರ ಈವರೆಗೆ ಎಷ್ಟು ಭೂಮಿಯನ್ನು ಸ್ಥಾಧೀನಪಡಿಸಿಕೊಂಡಿದೆ ?

## ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಪರಿಹಾರ ಮತ್ತು ರೈತರ ಮಕ್ಕಳಿಗೆ ಶಾಲಾ ಶುಲ್ಕ ಪಾವತಿಸದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨೯ (೧೨೧೦) ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೩ ವರ್ಷದಿಂದ ರಾಜ್ಯದಲ್ಲಿ ಬೆಳೆ ನಾಶ ಮತ್ತು ಸಾಲ ಬಾಧೆಯಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಆತ್ಮಹತ್ಯೆಗೆ ಶರಣಾದ ಎಷ್ಟು ರೈತರ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಿದೆ ; ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಲು ಬಾಕಿ ಇದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಆತ್ಮಹತ್ಯೆಗೆ ಶರಣಾದ ರೈತರ ಮಕ್ಕಳ ಶಾಲಾ/ವಸತಿ ಶುಲ್ಕವನ್ನು ಸರ್ಕಾರವೇ ಪಾವತಿ ಮಾಡುವ ಯೋಜನೆ ಆರಂಭವಾಗಿದ್ದು ಯಾವಾಗ ; ಯೋಜನೆಯಡಿ ಈವರೆಗೆ ಎಷ್ಟು ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರ ಪಾವತಿಸಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಯೋಜನೆ ಸ್ಥಗಿತಗೊಂಡಿದೆಯೇ; ಕಳೆದ ೩ ವರ್ಷದಿಂದ ಈ ವಿದ್ಯಾರ್ಥಿಗಳ ಶುಲ್ಕವನ್ನು ಸರ್ಕಾರ ಪಾವತಿ ಮಾಡದೆ ಇರಲು ಕಾರಣವೇನು ; ಎಷ್ಟು ವಿದ್ಯಾರ್ಥಿಗಳ ಶುಲ್ಕ ಪಾವತಿಗೆ ಬಾಕಿ ಇದೆ ; (ವರ್ಷವಾರು ವಿವರ ನೀಡುವುದು)

(ಉ) ಸರ್ಕಾರ ವಿದ್ಯಾರ್ಥಿಗಳ ಶುಲ್ಕ ಬಾಕಿ ಉಳಿಸಿಕೊಂಡಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಕುಟುಂಬದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸರ್ಕಾರ ಬಾಕಿ ಶುಲ್ಕ ಬಿಡುಗಡೆ ಮಾಡಲಿದೆ ?

# ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ನೀಡುವಾಗ ಆಗುತ್ತಿರುವ ಅನ್ಯಾಯದ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೧೩೦ (೧೨೩೮) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವಾಗ ಅನುಸರಿಸುತ್ತಿರುವ ನಿಯಮಗಳು ಮತ್ತು ಮಾನದಂಡಗಳು ಯಾವುವು ;

(ಆ) ರಾಜ್ಯ ಸರ್ಕಾರವು ಆದಾಯ ಪ್ರಮಾಣಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ ೧೯೯೩ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರಗಿಟ್ಟು ಕೆನೆಪದರ ನೀತಿ ಅನುಸರಿಸಬೇಕು ಎಂಬ ನಿಯಮಗಳು ಮತ್ತು ಅಧಿಸೂಚನೆಗಳನ್ನು ಪಾಲಿಸುತ್ತಿದೆಯೇ ;

(ಇ) ಇತ್ತೀಚೆಗೆ ರಾಜ್ಯ ಕಂದಾಯ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ನಿಯಮಗಳ ನಿರ್ದೇಶನದಂತೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಹಾಗೂ ಅಧಿಸೂಚನೆಗಳನ್ನು ಹೊರತುಪಡಿಸಿ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದ ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಈ) ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆ ಬರೆದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವೇತನ

ಆದಾಯ ೮ ಲಕ್ಷಕ್ಕಿಂತ ಹೆಚ್ಚಿದ್ದರೂ ಅಂತಹ ಮಕ್ಕಳಿಗೆ ಅಖಿಲ ಭಾರತ ಕೋಟಾದಡಿ ಪ್ರವೇಶ ನೀಡಲಾಗುತ್ತದೆ. ಆದರೆ ಅದೇ ವಿದ್ಯಾರ್ಥಿಗಳು ರಾಜ್ಯದ ಕೋಟಾದಡಿ ಪ್ರವೇಶ ಪಡೆಯುವಾಗ ಕೆನೆಪದರ ನೀತಿ ಅನ್ವಯಿಸಲಾಗುತ್ತಿದ್ದು ಅವಕಾಶ ವಂಚಿತರಾಗುವುದಕ್ಕೆ ಸರ್ಕಾರವೇ ನೇರ ಹೊಣೆಯಾಗುತ್ತಿದ್ದು ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಉ) ಭಾರತದ ಸಂವಿಧಾನದ ಅನುಚ್ಛೇದ ೩೪೨–ಎ(೩) ನಲ್ಲಿ ತಿಳಿಸಿರುವಂತೆ ರಾಜ್ಯ ಸರ್ಕಾರವು ರಾಜ್ಯದ ಸರ್ಕಾರಿ ನೌಕರರ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ನೌಕರರಿಗೆ ಆದಾಯ ಪ್ರಮಾಣಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ ೧೯೯೩ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರತುಪಡಿಸಿ ಕೆನೆಪದರ ನೀತಿಯನ್ನು ಅಳವಡಿಸಬಹುದಲ್ಲವೇ ; ಇದರಿಂದ ಸಾವಿರಾರು ಮಕ್ಕಳಿಗೆ ಅನುಕೂಲವಾಗುವುದಿಲ್ಲವೇ ; ಈ ಬಗ್ಗೆ ಸರ್ಕಾರದ ನಿಲುವೇನು ?

## ಅಲೆಮಾರಿಗಳು ಕನಿಷ್ಟ ಸೌಕರ್ಯಗಳಿಲ್ಲದೇ ಬದುಕು ನಡೆಸುತ್ತಿರುವ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೩೧ (೧೨೮೬) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ನಗರದಲ್ಲಿ ರಿಂಗ್‌ರೋಡ್‌ನಿಂದ ಆಳಂದಗೆ ಹೋಗುವ ರಸ್ತೆಯಲ್ಲಿ ಮತ್ತು ಶಹಬಾದ ರಸ್ತೆಯಲ್ಲಿ ಮುಳ್ಳು ಗಂಟೆಗಳು ಹಾಗೂ ತ್ಯಾಜ್ಯಗಳ ಮತ್ತು ಜೋಪಡಿ ಹಾಕಿಕೊಂಡು ಬದುಕುತ್ತಿರುವ ಅಲೆಮಾರಿ ಕುಟುಂಬಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕನಿಷ್ಠ ಸೌಕರ್ಯಗಳಿಲ್ಲದೆ, ರಾತ್ರಿ ಹೊತ್ತು ಯಾವುದೇ ರಕ್ಷಣೆ ಇಲ್ಲದೆ ಕುಟುಂಬದ ಸದಸ್ಯರೊಂದಿಗೆ ಬದುಕುತ್ತಿರುವ ಅಲೆಮಾರಿಗಳಿಗೆ ವಸತಿ, ಶೌಚಾಲಯಗಳನ್ನು, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು ನಾಗರಿಕ ಸಮಾಜದ ಮತ್ತು ಸರ್ಕಾರದ ಜವಾಬ್ದಾರಿಯಲ್ಲವೆ; ಇದಕ್ಕೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಶ್ರೀಮಂತರು ಆಕ್ರಮಿಸಿರುವ ಜಾಗವನ್ನು ಸಕ್ರಮಗೊಳಿಸುವ ಸರ್ಕಾರ, ಈ ಅಲೆಮಾರಿ ಕುಟುಂಬಗಳು ವಾಸಿಸುತ್ತಿರುವ ಜಾಗವನ್ನು ಅವರ ಹೆಸರಿಗೆ ವರ್ಗಾಯಿಸಿ ಹಕ್ಕು ಪತ್ರಗಳನ್ನು ನೀಡಬಹುದಲ್ಲವೆ ;

(ಈ) ಹೆಸರಿಗೆ ಮಾತ್ರ ಇರುವ ಅಲೆಮಾರಿ ಇಲಾಖೆ, ಅಲೆಮಾರಿ ಸಮುದಾಯಕ್ಕಾಗಿ ಇರುವ ಸರ್ಕಾರಿ ಯೋಜನೆಗಳು ಉದ್ಯೋಗಾವಕಾಶಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ?

## ವಿದ್ಯಾರ್ಥಿ ನಿಲಯಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿರುವ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩.೨ (೧೨೦೧) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸರ್ಕಾರಿ ಶಾಲೆ, ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಈ ಪೈಕಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ನಿಲಯಗಳ ಅಂಕಿ–ಅಂಶಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೂಲ ಕಾರಣಗಳೇನು ಎಂಬ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ ; ಈ ಸಾವಿಗೆ ಒತ್ತಡದ ಜೀವನ, ರ್‍ಯಾಗಿಂಗ್ ಅಥವಾ ಮೂಲಭೂತ ಸೌಕರ್ಯಗಳ ಕೊರತೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ವರದಿಯಾಗಿರುವಂತೆ 'ಕರ್ನಾಟಕ ಆತ್ಮಹತ್ಯೆ ತಡೆ ನೀತಿ–೨೦೨೫' ಅನ್ನು ಜಾರಿಗೆ ತರಲು ಸರ್ಕಾರ ಸಿದ್ಧತೆ ನಡೆಸಿದೆಯೇ ; ಈ ನೀತಿಯ ಪ್ರಮುಖ ಉದ್ದೇಶಗಳು ಮತ್ತು ಅನುಷ್ಠಾನದ ಹಂತಗಳೇನು ;

(ಈ) ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಕಾಪಾಡಲು ಆಪ್ತ ಸಮಾಲೋಚಕರನ್ನು (Counselors) ನೇಮಕ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಈ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ?

## ಭಿಕ್ಷಾಟನೆಯನ್ನು ಶಾಶ್ವತವಾಗಿ ನಿರ್ಮೂಲನೆ ಮಾಡುವ ಬಗ್ಗೆ

**ಡಾ: ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೩ (೧೨೫೨) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಭಿಕ್ಷುಕರ ಆಶ್ರಯ ಕೇಂದ್ರಗಳಿವೆ ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಭಿಕ್ಷುಕರನ್ನು (ಪುರುಷರು ಹಾಗೂ ಮಹಿಳೆಯರು) ಪತ್ತೆ ಹಚ್ಚಿ ಪುನರ್ವಸತಿಗಾಗಿ ವಶಕ್ಕೆ ಪಡೆಯಲಾಗಿದೆ ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಇ) ಇವರುಗಳಲ್ಲಿ ಎಷ್ಟು ಮಂದಿ ಪುರುಷರು ಹಾಗೂ ಮಹಿಳೆಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ ; (ವಿವರಗಳನ್ನು ನೀಡುವುದು)

(ಈ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಭಿಕ್ಷುಕರ ಪುನರ್ವಸತಿಗಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ ; (ವರ್ಷವಾರು ವಿವರಗಳನ್ನು ನೀಡುವುದು)

(ಉ) ಪ್ರತಿ ವರ್ಷವೂ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದರೂ, ಭಿಕ್ಷಾಟನೆ ವಿಶೇಷವಾಗಿ ಬೆಂಗಳೂರಿನಲ್ಲಿ ಕಡಿಮೆಯಾಗುತ್ತಿಲ್ಲವೆಂಬ ದೂರುಗಳಿವೆ ; ಇದಕ್ಕೆ ಕಾರಣಗಳೇನು ;

(ಊ) ಸಂಪೂರ್ಣವಾಗಿ ಭಿಕ್ಷಾಟನೆ ನಿರ್ಮೂಲನೆಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ವಿವರಗಳನ್ನು ನೀಡುವುದು)

## ಸಿಂಧನೂರು ತಾಲ್ಲೂಕಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೪ (೧೧೯೪) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಿಂಧನೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಒಟ್ಟು ೫ ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಮಂಜೂರಾದ ಸಂಖ್ಯೆಗಿಂತ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದು ವಿದ್ಯಾರ್ಥಿನಿಲಯದ ಮಂಜೂರಾತಿ ಸಾಮರ್ಥ್ಯ ೧೦೦ ವಿದ್ಯಾರ್ಥಿಗಳು ಮಾತ್ರ ಆಗಿದ್ದು, ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಲ್ಲಿ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಷ್ಟಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಸಂಬಂಧ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ರಾಯಚೂರು ಇವರಿಂದ ವರದಿ ಪಡೆದು ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯವಿರುವ ಹೆಚ್ಚುವರಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಸಂಬಂಧ ಸರ್ಕಾರದ ನಿಲುವೇನು ;

(ಈ) ಯಾವ ಕಾಲಮಿತಿಯೊಳಗೆ ಸಿಂಧನೂರು ತಾಲ್ಲೂಕಿಗೆ ಅಗತ್ಯವಿರುವ ಹೆಚ್ಚುವರಿ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಸರ್ಕಾರದಿಂದ ಮಂಜೂರಾತಿ ನೀಡಲಾಗುವುದು ?

## ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಕಳೆದ ೩ ವರ್ಷಗಳಲ್ಲಿ ಪಾವತಿ ಮಾಡಲಾದ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನದ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೫ (೧೨೨೦) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹಧನವನ್ನು

ಪಾವತಿಸಲು ನಿಗದಿಪಡಿಸಲಾದ ವಾರ್ಷಿಕ ಗುರಿ ಎಷ್ಟು ; (ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಮಾಹಿತಿಯನ್ನು ಒದಗಿಸುವುದು)

(ಆ) ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ಹಾಗೂ ವರ್ಗವಾರು (SC/ST) ವಿವರ ನೀಡುವುದು)

(ಇ) ನಿಗದಿತ ಗುರಿಗೆ ಹೋಲಿಸಿದರೆ ಶೇಕಡಾವಾರು ಎಷ್ಟು ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ; ಬಾಕಿ ಇರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಬಾಕಿ ಮೊತ್ತ ಎಷ್ಟು ;

(ಈ) ಇನ್ನೂ ಹಲವಾರು ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ ಬಿಡುಗಡೆಯಾಗದೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಮಾಹಿತಿಯನ್ನು ಒದಗಿಸುವುದು)

(ಉ) ಆರ್ಥಿಕ ವರ್ಷ ಮುಕ್ತಾಯದ ಹಂತದಲ್ಲಿದ್ದರೂ ವಿದ್ಯಾರ್ಥಿವೇತನ ಪಾವತಿಯಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ; ಬಾಕಿ ಮೊತ್ತವನ್ನು ಶೀಘ್ರವಾಗಿ ಪಾವತಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳು ಯಾವುವು ; ಪಾವತಿಗೆ ನಿಗದಿತ ಸಮಯಾವಕಾಶವನ್ನು ಸರ್ಕಾರ ಘೋಷಿಸುವುದೇ ? (ಮಾಹಿತಿಯನ್ನು ಒದಗಿಸುವುದು)

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ./ಪಿ7

**List of Questions for Oral Answers**

**Total No. of Questions - 15**

# LIST - 9

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Friday, the 13th March, 2026

---

**GROUP - V**

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

### INCREASE OF MAHILA SUPPLEMENTARY PRODUCTION CENTRES (MSPC) TO IMPROVE THE QUALITY OF FOOD IN ANGANWADI CENTRES IN THE STATE

**Dr. Dhananjaya Sarji (Graduates' Constituency) -**

121 (1208) Will the Minister for Women and Child Development and Empowerment of Differently Abled and Senior Citizens be pleased to state :-

(a) the particulars of foods items which are being provided currently to Anganwadi children at present ; the standards of nutrition of food which is being provided ;

(b) the reason behind the stopage of the distribution of chikki in Anganwadi centres ; whether the nutritional assessment of the food which is being carriedout instead of providing the same ;

(c) the number of days in a week the eggs are being distributed to Anganwadi children; whether the eggs being distributed as per the nutritional standards ;

(d) the number of Anganwadi Centres which are coming under each Mahila Supplementary Production Centres (MSPC) in the State ;

(e) whether the steps are taken by the Government to increase the number of Mahila Supplementary Production Centres(MSPC) thereby ensuring the quality of the food production and supply of food in time ;

(f) the comprehensive step that would be taken by the Government to increase the quality of food which is distributed to the children in Anganwadi centres and to prevent the substandard food supply and supply of food on time ? (details be furnished)

**SEWING MACHINE DISTRIBUTION SCHEME**

**Dr. Yathindra S. (Elected by Legislative Assembly) -**

122 (1300) Will the Minister for Backward Classes Welfare and Kannada and Culture be pleased to state :-

(a) the number of application that have been received under the sewing machine distribution scheme by the all corporations which are functioning by the Backward Classes Welfare Department during the last 3 years ; (corporationwise information be furnished)

(b) the number of beneficiaries who have been selected and distributed the sewing machine under sewing machine distribution scheme during the last 3 years ? (corporationwise, yearwise and districtwise details be furnished)

**GRANT OF THE SOCIAL WELFARE DEPARTMENT AND BHOVI DEVELOPMENT CORPORATION**

**Sri T.N. Javarayi Gowda (Elected by Legislative Assembly) -**

123 (1290) Will the Minister for Social Welfare be pleased to state :-

(a) the grant that has been provided to the Social Welfare Department in the budget for the year 2025-2026 ;

(b) out of the grant that has been provided, the districtwise information of the grant that has been allotted under the various schemes be furnished ;

(c) out of the districtwise allocated grant, the grant that has been spent so far ; districtwise information be furnished ;

(d) the detailed information regarding the grant that has been allocated and spent under the various schemes for the Yeshwanthpur Assembly Constituency during the year 2025-26 be furnished ;

(e) whether it has come to the notice of the Government that the selected and sanctioned list of beneficiaries under the Direct Loan, Ganga Kalyana, Entrepreneurship, Micro Credit and Swavalambi Sarathi Schemes under the Government institutional quota which was available in the Karnataka Bhovi Development Corporation in the same year have been cancelled ;

(f) if so, the reason for the cancellation; the details be furnished; and whether the grant would be provided to the beneficiaries for those name has been mentioned in the sanctioned list by withdrawing the cancellation of these beneficiary list?

**HOUSING SCHEMES FOR NOMADIC/SEMI-NOMADIC COMMUNITY**

**Sri P.H. Pujar (Local Authorities Constituency) -**

124 (1302) Will the Minister for Backward Classes Welfare and Kannada and Culture be pleased to state :-

(a) the number of nomadic/semi-nomadic communities in Bagalkot district ; talukwise information be furnished ; the information of names of the various sub tribes of the nomadic/semi-nomadic communities who are residing in various taluks of the districts and their population be furnished ;

(b) the number of houses that have been sanctioned to the people of the said community from 2007-08 to 2022-23; the details of the progress of the houses that have been constructed upto various stages be furnished ; (talukwise information be furnished)

(c) whether the siteless and houseless survey has been conducted with regard to the said community in the district ; if so, the details of the siteless and houseless people be furnished ; the timelimit within which the survey would be conducted ;

(d) since the officers have not provided the information of the scheme properly for the nomadic/semi-nomadic community in Bagalkot district, eventhough there is a large population of these communities in the district and they are being deprived from the benefits of these schemes ; the steps taken by the Government to utilize the schemes properly ? (information be furnished)

## CONDITION AND BASIC FACILITIES IN THE HOSTELS OF BACKWARD CLASSES IN BIDAR DISTRICT

**Dr. M.G. Muley (Elected by Legislative Assembly) -**

125 (1145) Will the Minister for Backward Classes Welfare and Kannada and Culture be pleased to state :-

(a) the number of pre-matric and post-matric hostels of the backward classes which are functioning in Bidar district at present ; out of which, the number of hostels which are running in their own buildings and rented buildings; (talukwise complete details be furnished)

(b) the total grant that has been released by the Government for the construction of new buildings and repair works of hostels in this district during in the last three financial years (from 2023-24 to 2025-26); out of which, the number of works that have been completed and the status of the remaining works;

(c) whether it has come to the notice of the Government that the hardship is being faced by the students due to lack of potable water, inconvenience of toilets and shortage of security personnel in various hostels of the districts; if so, the emergency steps taken by the Government to provide these basic facilities;

(d) the number of warden (hostel superintends), cooking staff and Group-D posts which are lying vacant in the hostels of Bidar district; the timelimit that has been prescribed by the Government to fill these posts through regularising or direct recruitment in the interest of education;

(e) whether the proposal is before the Government to sanction new additional hostels to Bidar district in view of the increasing demand from the students during the year 2026-27; if so, the complete details thereof be furnished?

## PROTEST BY THE UNION OF GRAM PANCHAYAT MEMBERS

**Sri Bhimrao Basavaraj Patil (Local Authorities Constituency)-**

126 (1253) Will the Minister for Rural Development and Panchayat Raj and Information Technology and Bio-Technology be pleased to state :-

(a) whether it has come to the notice of the Government that the union of Gram Panchayat members are protesting for continuation of the existing administrative body since their term has been terminated or to conduct immediate elections for Gram Panchayats in the State;

(b) if so, the steps taken by the Government in this regard? (details be furnished)

## REGARDING LEGISLATOR'S LOCAL AREA DEVELOPMENT FUND

**Sri Keshava Prasad S. (Elected by Legislative Assembly) -**

127 (1137) Will the Minister for Planning and Statistics be pleased to state :-

(a) whether it has come to the notice of the Government that the funds of work which are not commenced within two years being with drawing from the legislator's local area development fund; if so, the complete information of the guidelines of the Government be furnished;

(b) whether it has come to the notice of the Government that there is a delay in releasing the legislator's local area development fund within the stipulated time; whether it has come to the notice of the Government that the same is being delayed in the office of the Deputy Commissioner's and the implementing agencies in the implementation of works that have been recommended by the legislators; if so, the measures taken by the Government; complete information be furnished;

(c) the details of the tax that would be imposed for the implementation of the works in the legislator's local area development fund; whether it has come to the notice of the Government that excessive fund is being deducted in the name of the tax in the agencies which have entrusted for the implementation of works by the legislators; if so, the measures taken by the Government; complete information be furnished?

## ESTABLISHMENT OF IT-BT COMPANIES IN THE KALYANA KARNATAKA REGION

**Sri K.S. Naveen (Local Authorities Constituency) -**

128 (1289) Will the Minister for Rural Development and Panchayat Raj and Information Technology and Bio-Technology be pleased to state :-

(a) the number of districts which are coming under the Kalyana Karnataka region in the State;

(b) the total number of IT-BT companies that have been established so far in these districts during the last 3 years;

(c) the extent of land that has been acquired by the Government for the establishement of IT-BT companies so far?

**NON-PAYMENT OF COMPENSATION TO FARMERS WHO ARE COMMITTED TO SUICIDE AND SCHOOL FEES TO THEIR CHILDREN**

**Sri C.T. Ravi (Elected by Legislative Assembly) -**

129 (1210) Will the Minister for Agriculture be pleased to state :-

(a) the number of farmers who have committed to suicide due to the crop loss and debt burden in the State during the last 3 years; (districtwise details be furnished)

(b) the number of families of farmers who have committed suicide have been provided the compensation by the Government; the number of families for which the the compensation is pending for the payment so far; (districtwise details be furnished)

(c) the date on which the scheme to pay the school/ residential fees of the children of farmers who have committed to suicide has been commenced by the Government itself; the number of students to whom fees have been paid by the Government under this scheme so far; (districtwise information be furnished)

(d) whether the scheme has been stopped after the current Government came into power; the reason for non-payment of fees of these students during the last 3 years; the number of students to whom fees is pending for the payment; (yearwise details be furnished)

(e) whether it has come to the notice of the Government that the hardship is being faced by the students and their families due to the Government has kept pending the fees of the Students; if so, the timelimit within which the outstanding fees would be released by the Government?

## INJUSTICE CAUSED FOR BACKWARD CLASSES

**Sri Shashil G. Namoshi (Teachers' Constituency) -**

130 (1238) Will the Minister for Backward Classes Welfare and Kannada and Culture be pleased to state :-

(a) the particular of rules and yardsticks that are being complied by the Government while issuing Income and Caste Certificates for the Government and aided employees coming under the backward classes;

(b) whether the rules and notifications are being complied that the creamy layer policy would followed excluding the agriculture and salary income as per the notification of 1993 of the Central Government while issuing income certificate by the State Government;

(c) whether it has come to the notice of the Government that the children of salaried persons are being deprived from the opportunities to get the medical, engineering and other vocational admission under All India and State quota due to different creamy layer policy is being complied excluding the rule and notifications framed by the Central Government while providing reservation for backward classes as per the guidelines of the rules of the Social Welfare Department by the Revenue Department of the State recently; if so, the measures taken in this regard;

(d) the student from backward classes who take national level entrance exam and get admission for various courses are being given admission under All India quota eventhough the salary income of their parents is

morethan 8 lakhs, however, when the same students get admission under the State quota, the creamy layer policy is being applied and the Government itself is directly responsible for the students being deprived of opportunities, the measures taken in this regard;

(e) whether the creamy layer policy would be applicable by excluding the agriculture and salary income according to the notification of 1993 of the Central Government while issuing income certificate by the State Government for the employees in the interest of the education of children of the State Government employees as intimated in the Article 342-A(3) of the Constitution of India; whether it will benefit to the thousands of children thereof; the stand of the Government in this regard?

## LIFE OF NOMADIC COMMUNITIES WITHOUT MINIMUM FACILITIES

**Dr. Talwar Sabanna (Nominated) -**

131 (1286) Will the Minister for Social Welfare be pleased to state :-

(a) whether it has come to the notice of the Government with regard to the families of nomadic communities who are living in the hut made from thorny shrubs and wastes in the road which is leading from ring road to Aland and Shahabad road in Kalaburagi city;

(b) whether it is the responsibility of the civic society and the Government to provide housing, toilets, education and health facilities for nomadic communities who are living with their family members without minimum facilities and without any protection during night; the steps taken by the Government for the same;

(c) the Government is regularizing the land that has been occupied by the wealthy class, whether the title deeds would be issued for these nomadic families by transferring the land where they are residing into their names;

(d) the nomadic department exists for the sake of name only, the step that would be taken by the Government to provide the Government schemes for nomadic communities, job opportunities and basic facilities?

## INCREASE OF SUICIDE CASES IN HOSTELS

**Sri Thippanappa Kamaknoor (Elected by Legislative Assembly) -**

132 (1201) Will the Minister for Social Welfare be pleased to state :-

(a) the total number of students who have committed suicide in the Government schools, residential schools and hostels in the State during the last 3 years; out of which, the statistics of the hostels which are coming under the Social Welfare Department and Education Department; (districtwise details be furnished)

(b) whether the survey has been conducted by the Government with regard to main reasons for students suicide in the hostels; whether it has come to the notice of the Government that the stressful life, ragging or lack of basic facilities are the reasons for these deaths;

(c) whether the Government has made preparation to implement the ‘ Karnataka Suicide Prevention Policy-2025 ’ as reported; the particulars of major objectives of this policy and the stages of the implementation thereof;

(d) whether the plan is before the Government to appoint the counselors to protect the mental health of the students in hostels; if so, the present stage of this process?

## PERMANENT ERADICATION OF BEGGING

**Dr. K. Govindaraj (Elected by Legislative Assembly) -**

133 (1252) Will the Minister for Social Welfare be pleased to state :-

(a) the number of beggars rehabilitation centres in the State; (districtwise details be furnished)

(b) the number of beggars (men and women) who have been identified and taken into custody for the rehabilitation; (districtwise details be furnished)

(c) out of them the number of men and women to whom the rehabilitation has been provided; (details be furnished)

(d) the amount that has been spent in the State for the rehabilitation of beggars; (yearwise details be furnished)

(e) there are complaints that begging is not reducing especially in Bengaluru even though crores of rupees are being spent every year,; the reasons for the same;

(f) the steps taken by the Government for the complete eradication of begging? (details be furnished)

## SANCTIONING OF ADDITIONAL HOSTELS TO SINDHANUR TALUK

**Sri Basanagouda Badarli (Elected by Legislative Assembly)-**

134 (1194) Will the Minister for Social Welfare be pleased to state :-

(a) total 5 post-matric hostels are functioning under the Social Welfare Department in Sindhanur taluk, whether it has come to the notice of the Government that the excess students are enrolled more than the sanctioned capacity;

(b) the sanctioned capacity of a hostel is only for 100 students, whether it has come to the notice of the Government that if the large number of students are enrolled it will become extremely difficult to provide the necessary basic facilities to the students properly;

(c) if so, the stand of the Government regarding sanctioning the required additional hostels according to the number of students who are seeking admission by obtaining the report by the Chief Executive Officer of Raichur district in this regard;

(d) the timelimit within which the approval would be accorded by the Government to construct the required additional hostels to Sindhanur taluk?

**SCHOLARSHIP AND INCENTIVE PAID FOR THE STUDENTS BY SOCIAL WELFARE DEPARTMENT**

**Smt. Hemalatha Nayak (Elected by Legislative Assembly) -**

135 (1220) Will the Minister for Social Welfare be pleased to state :-

(a) the annual target that has been prescribed by the Social Welfare Department to pay the scholarship and incentive for the students during the last three financial years; (the information of Kalyana Karnataka district be furnished)

(b) the grant that has been released therefor; (districtwise and categorywise (SC/ST) details be furnished)

(c) when it is compared to prescribed target, the percentage of physical and financial progress that has been achieved; the number of remaining students and the outstanding amount for the same;

(d) whether it has come to the notice of the Government that the scholarship and incentive has been kept pending without releasing for several eligible students; (information be furnished)

(e) the reasons for the delay in the payment of scholarship even though the financial year is ending; the emergency steps taken by the Government for the speedy payment of the outstanding amount; whether the prescribed timelimit would be declared by the Government for payment? (information be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD - 768, - Copies